10

ಅನುಬಂಧ-೧೦

ನಂ.ಎಎಲ್ಎನ್ (ಸಿ)ಎಸ್ಆರ್ ೨೮೦/೨೦೦೫-೦೬ ಜಿಲ್ಲಾಧಿಕಾರಿಗಳವರ ಕಾರ್ಯಾ
280/05-06
ಬೆಂಗಳೂರು ಗ್ರಾಮಾಂತರ
ಬೆಂಗಳೂರು, ದಿನಾಂಕ ೨೫.೦೮
25-

## ಅಧಿಕೃತ ಜ್ಞಾಪನ

ವಿಷಯ: ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು ಕಸಬಾ ಹೋ ಗೊರಿನಬೆಲೆ ಗ್ರಾಮದ ಸ.ನಂ.೪೫/೫ ರಲ್ಲಿ ೩-೨೦ ೧/೨ ಎಕರೆ ಮತ್ತು ಸ.ನಂ. ೪೫/೬ರಲ್ಲಿ ೩-೧೯ ಎಕರೆ ಮತ್ತು ೦-೧೦ ಗುಂಟೆ ಎ ಖರಾಬು ಸೇರಿ ಒಟ್ಟು ೭-೦೯ ೧/೨ ಎಕರೆ ವಿಸ್ತೀರ್ಣದ ವ್ಯವಸಾಯೇತರ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ ಶ್ರೀ.ಆರ್.ಎಸ್.ಮೂರ್ತಿರವರು ಸಲ್ಲಿಸಿರುವ ಅರ್ಜಿಯ ದಿನಾಂಕ ೨೬.೧೨.೨೦೦೬

ಉಲ್ಲೇಖ:
೧ ತಹಸೀಲ್ದಾರ್, ನೆಲಮಂಗಲ ತಾಲ್ಲೂಕುರವರ ವರದಿ ಸಂಖ್ಯೆ ಎಎಲ್ಎನ್.ಸಿಆರ್ ೫೮/೦೫-೦೬ ದಿನಾಂಕ ೧೬.೦೩.೨೦೦೬
೨ ಭೂ ಪರಿವರ್ತನಾ ಶುಲ್ಕ ರೂ ೩೧೫೧೪೬.೦೦, ೦-೧೦ ಗುಂಟೆ ಎ ಖರಾಬ್ ಜಮೀನಿನ ಕಿಮ್ಮತ್ತು ೩೫೦೦೦.೦೦ ಮತ್ತು ಪೋಡಿ ಶುಲ್ಕ ರೂ ೧೫೦.೦೦ ಒಟ್ಟು ೩೫೦೨೯೬.೦೦ ಗಳನ್ನು ಚಲನ್ ನಂ.೨೬ ಮತ್ತು ೨೭ ದಿನಾಂಕ ೧೫.೭.೨೦೦೬ ರಂದು ಎಸ್.ಬಿ.ಎಂ. ನೆಲಮಂಗಲ ಶಾಖೆಗೆ ಅರ್ಜಿದಾರರು ಜಮಾ ಮಾಡಿರುತ್ತಾರೆ.
೩. ಏಕಗವಾಕ್ಷಿ ಸಮಿತಿಯ ನಡವಳಿಗಳ ದಿನಾಂಕ ೦೬.೦೫.೨೦೦೬
೪ ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ ರವರ ಪತ್ರ ಸಂಖ್ಯೆ ನೆಯೋಪ್ರಾ/ಎನ್‌ಒಸಿ/೧೫೪/೦೫-೦೬ ದಿನಾಂಕ ೧೩.೭.೨೦೦೬

-//-

ಶ್ರೀ.ಆರ್.ಎಸ್.ಮೂರ್ತಿರವರು ನೆಲಮಂಗಲ ತಾಲ್ಲೂಕು ಕಸಬಾ ಹೋಬಳಿ ಗೊರಿನಬೆಲೆ ಗ್ರಾಮದ ಸ.ನಂ.೪೫/೫ ರಲ್ಲಿ ೩-೨೦ ೧/೨ ಎಕರೆ ಮತ್ತು ಸ.ನಂ.೪೫/೬ರಲ್ಲಿ ೩-೧೯ ಎಕರೆ ಮತ್ತು ೦-೧೦ ಗುಂಟೆ ಎ ಖರಾಬು ಸೇರಿ ಒಟ್ಟು ೭-೦೯ ೧/೨ ಎಕರೆ ವಿಸ್ತೀರ್ಣದ ವ್ಯವಸಾಯೇತರ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ ದಿನಾಂಕ ೨೬.೧೨.೨೦೦೬ ರಂದು ಅರ್ಜಿ ಸಲ್ಲಿಸಿರುವರು. ಸದರಿ ಅರ್ಜಿದಾರರು ಅಗತ್ಯ ಶುಲ್ಕ ರೂ ೩೫೦೨೯೬.೦೦ (350296) ಶುಲ್ಕವನ್ನು ಸಂದಾಯ ಉಲ್ಲೇಖ (೨)ರನ್ವಯ ಮಾಡಿರುವರು.

ಸದರಿಯವರ ಕೋರಿಕೆಯನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ ೧೯೬೪ರ ಕಲಂ ೯೫ರ ಮತ್ತು ಅದರ ಉಪಬಂಧಗಳನ್ನು ಒಳಗೊಂಡ ಕರ್ನಾಟಕ ಮುನ್ಸಿಪಾಲಿಟಿ ಕಾಯ್ದೆ /ಕಾರ್ಪೋರೇಷನ್ ಕಾಯ್ದೆ/ಪಂಚಾಯಿತಿ ಕಾಯ್ದೆಯಲ್ಲಿನ ಹಾಗೂ ಕರ್ನಾಟಕ ಕಂಟ್ರಿ ಟೌನ್ ಪ್ಲಾನಿಂಗ್ ಕಾಯ್ದೆಯಲ್ಲಿನ ಅವಕಾಶಗಳನ್ನು ಅನುಸರಿಸಿ ಪರಿಶೀಲಿಸಲಾಗಿದೆ. ಅರ್ಜಿದಾರರು ಲಭ್ಯಪಡಿಸಿದ ಅಗತ್ಯ ದಾಖಲೆಗಳನ್ನು ಪರಿಶೀಲನೆಗೆ ಒಳಪಡಿಸಿ ಸಂಬಂಧಿತ

ಕಾಯ್ದೆ ನಿಯಮಗಳಲ್ಲಿನ ಎಲ್ಲಾ ಸಂಬಂಧಿತ ಷರತ್ತುಗಳನ್ನು ಪೂರೈಸಿರುವ ಬಗ್ಗೆ ಏಕಗವಾಕ್ಷಿ ಸಮಿತಿಯವರು ಮೇಲ್ಕಂಡ ಕಾಯ್ದೆ ಮತ್ತು ನಿಯಮಗಳಲ್ಲಿನ ಷರತ್ತುಗಳನ್ನು ಪಾಲಿಸಿರುವ ಬಗ್ಗೆ ಮನದಟ್ಟು ಮಾಡಿಕೊಂಡಿರುವರು.

ಅರ್ಜಿದಾರರು ಪ್ರಾಧಿಕೃತ ಅಧಿಕಾರಿಯವರಿಂದ ಅನುಮೋದಿತ ಬಡಾವಣೆ ಯೋಜನೆ ಮತ್ತು ನಕ್ಷೆಯನ್ನು ಸಹ ಸಲ್ಲಿಸಿರುತ್ತಾರೆ. ಏಕಗವಾಕ್ಷಿ ಸಮಿತಿಯು ಅರ್ಜಿದಾರರು ಅಗತ್ಯ ಕ್ರಮ ಕೈಗೊಂಡಿರುವ ಬಗ್ಗೆ ತೃಪ್ತಿ ಹೊಂದಿದ್ದು, ಶ್ರೀ.ಆರ್.ಎಸ್.ಮೂರ್ತಿರವರು ನೆಲಮಂಗಲ ತಾಲ್ಲೂಕು ಕಸಬಾ ಹೋಬಳಿ ಗೊಲ್ಲಹಳ್ಳಿ ಗ್ರಾಮದ ಸ.ನಂ.೪೫/೫ ರಲ್ಲಿ ೩-೨೦ ೧/೨ ಎಕರೆ ಮತ್ತು ಸ.ನಂ.೪೫/೬ರಲ್ಲಿ ೩-೧೮ ಎಕರೆ ಮತ್ತು ೦-೧೦ ಗುಂಟೆ ಎ ಖರಾಬು ಸೇರಿ ಒಟ್ಟು ೭-೨೮ ೧/೨ ಎಕರೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ವಾಸದ ಉದ್ದೇಶಕ್ಕೆ ಭೂ ಪರಿವರ್ತನೆ ನೀಡಲಾಗಿದೆ.

1. ಈ ಭೂ ಪರಿವರ್ತಿತ ಜಮೀನನ್ನು ವಾಸದ ಉದ್ದೇಶಕ್ಕಾಗಿ [illegible] ಪ್ರಾಧಿಕಾರದ ಅನುಮತಿ ಇಲ್ಲದೆ ಬೇರೆ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದಲ್ಲ.
2. ಈ ಜಮೀನಿನಲ್ಲಿ ಅನುಮೋದನೆಗೊಂಡ ನಕ್ಷೆಗೆ ಅನುಗುಣವಾಗಿ ಕಟ್ಟಡಗಳನ್ನು ನಿರ್ಮಿಸಬೇಕು ಮತ್ತು ಸದರಿ ಜಮೀನಿನಲ್ಲಿ ಲೇ ಔಟ್ ಪ್ಲಾನಿಗೆ ಅನುಮೋದನೆ ಪಡೆದಂತೆ ನಿಗದಿಪಡಿಸಿದ ಗಾತ್ರದ ನಿವೇಶನಗಳನ್ನು ಮಾತ್ರ ಪರಭಾರೆ ಮಾಡತಕ್ಕದ್ದು.
3. ಇತರೆ ಆವಶ್ಯಕವಾದ ರಸ್ತೆ ಜಾಗ, ರಸ್ತೆ ಮಾರ್ಜಿನ್, ಖಾಲಿ ಜಾಗ ಇತ್ಯಾದಿಗಳನ್ನು ನೆಲಮಂಗಲ ಯೋಜನಾ (ಪ್ರಾಧಿಕಾರ/ನಗರಪಾಲಿಕೆ/ಇತ್ಯಾದಿ)ರವರಿಂದ ಅನುಮೋದಿಸಲ್ಪಟ್ಟ ಬಡಾವಣೆ ನಕ್ಷೆ ಪ್ರಕಾರ ಹಾಗೂ ನಿದಿಷ್ಟಪಡಿಸಿದ ನಿಯಮಗಳ ರೀತ್ಯಾ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು
4. ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಜಮೀನಿನಲ್ಲಿನ ನಿವೇಶನದಾರರಿಗೆ ನಾಗರೀಕ ಸೌಲಭ್ಯಗಳಾದ ವಿದ್ಯುಚ್ಛಕ್ತಿ, ನೀರು ಸರಬರಾಜು ಒಳಚರಂಡಿ ವ್ಯವಸ್ಥೆ ಇತ್ಯಾದಿಗಳನ್ನು ಆರೋಗ್ಯ ನೈರ್ಮಲೀಕರಣ ಸಾರ್ವಜನಿಕ ಅನುಕೂಲತೆ ಹಾಗೂ ಭದ್ರತೆಗಳ ಉದ್ದೇಶದಿಂದ ಈ ಎಲ್ಲಾ ಸೌಲಭ್ಯಗಳನ್ನು ಕಾನೂನು ರೀತ್ಯಾ ಒದಗಿಸಿದ ನಂತರವೇ ನಿವೇಶನಗಳ ಹಂಚಿಕೆ/ಪರಭಾರೆ ಮಾಡತಕ್ಕದ್ದು.
5. ಈ ಜಮೀನಿಗೆ ತಾಕು ಫ್ಲಾಟ್ ಖರಾಬ್ ಜಮೀನಿದ್ದಲ್ಲಿ ಕರ್ನಾಟಕ ಭೂ ಕಂದಾಯ ಕಾಯಿದೆ ೧೯೬೪ರ ಕಲಂ ೬೭ರಂತೆ ಸರ್ಕಾರದ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು. ಹಾಗೂ ಪ್ರಸ್ತುತ ಭೂ ಪರಿವರ್ತನೆಗೆ ಒಳಪಟ್ಟಿರುವ ಸರ್ವೆ.ನಂ. 45/6 ರಲ್ಲಿನ 0-೧೦ ಗುಂಟೆ ಎ ಖರಾಬು ವಿಸ್ತೀರ್ಣಕ್ಕೆ ಮಾರುಕಟ್ಟೆ ದರ - ಮತ್ತು ಭೂ ಪರಿವರ್ತನೆ ಶುಲ್ಕ ರೂ ೩.೫೦೦೦.೦೦ ಪಾವತಿಸಿಕೊಳ್ಳಲಾಗಿದ್ದು ವಾಸದ ಉದ್ದೇಶಕ್ಕಾಗಿ ಬಳಸಲು ಭೂ ಪರಿವರ್ತನೆ ನೀಡಿದೆ. ಹಾಗೂ ಸರ್ವೆ.ನಂ. 45/6 ರಲ್ಲಿನ 0-0೨ ಗುಂಟೆ ವಿಸ್ತೀರ್ಣ ಬಿ ಖರಾಬನಲ್ಲಿ ಬರುವ ಕಾರಣ ಇದನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿರಿಸಲಾಗಿದೆ. ಈ ವಿಸ್ತೀರ್ಣದ ಮೇಲೆ ಅರ್ಜಿದಾರರಿಗೆ ಯಾವುದೇ ಹಕ್ಕು ಇರುವುದಿಲ್ಲ. ಈ ಬಿ ಖರಾಬಿನ ವಿಸ್ತೀರ್ಣದ ಹಕ್ಕು ಯಾವಾಗಲೂ ಸರ್ಕಾರಕ್ಕೆ ಸೇರಿರುತ್ತದೆ. ತಹಸೀಲ್ದಾರ್‌ರವರು ಈ ಬಾಬ್ತು ಆರ್.ಟಿ.ಸಿ.ಯಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.
6. ಲೋಕೋಪಯೋಗಿ ಇಲಾಖೆಯವರು ಶಾಸನಾತ್ಮಕವಾಗಿ ನಿರ್ಧರಿಸಿರುವಂತೆ ಈ ಜಮೀನಿನಲ್ಲಿ ಕಟ್ಟಲು ಉದ್ದೇಶಿಸಿರುವ ಕಟ್ಟಡವು ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ ನಿಗದಿಪಡಿಸಿದ ಅಂತರವನ್ನು ಮತ್ತು ಜಿಲ್ಲಾ ಹೆದ್ದಾರಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ ನಿಗದಿಪಡಿಸಿದ ಅಂತರವನ್ನು ಕಾದಿರಿಸಬೇಕು. ಹಾಗೂ ಈ ಖಾಲಿ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದು.

## ಷೆಡ್ಯೂಲ್ ವಿವರ

ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು ಕಸಬಾ ಹೋಬಳಿ ಗೋರಿನಬೆಲೆ ಗ್ರಾಮದ ಸ.ನಂ.೪೫/೩ ರಲ್ಲಿ ೩-೨೦ ೧/೩ ಎಕರೆ ಮತ್ತು ಸ.ನಂ.೪೫/೭ರಲ್ಲಿ ೩-೧೯ ಎಕರೆ ಮತ್ತು ೦-೧೦ ಗುಂಟೆ ಖರಾಬು ಸೇರಿ ಒಟ್ಟು ೭-೦೯ ೧/೩ ಎಕರೆ (ಏಳು ಎಕರೆ ಒಂಭತ್ತುವರೆ ಗುಂಟೆ) ವಿಸ್ತೀರ್ಣಕ್ಕೆ ಭೂ ಪರಿವರ್ತಿತ ಜಮೀನಿನ ಚಕ್ಕುಬಂದಿ

| | |
|---|---|
| ಪೂರ್ವಕ್ಕೆ | ಅರ್ಜದಾರರ ಜಮೀನು ಸರ್ವೆ.ನಂ. ೪೫/೪ |
| ಪಶ್ಚಿಮಕ್ಕೆ | ಅರ್ಜದಾರರ ಜಮೀನು ಸರ್ವೆ.ನಂ. ೪೫/೭ |
| ಉತ್ತರಕ್ಕೆ | ಗೋರಿನಬೆಲೆ ರಸ್ತೆ |
| ದಕ್ಷಿಣಕ್ಕೆ | ಖಾಸಗಿ ಜಮೀನು |

ಸಹಿ/-

(ಡಿ.ಕೆ.ರಂಗಸ್ವಾಮಿ)

ಜಿಲ್ಲಾಧಿಕಾರಿಗಳು

ಬೆಂಗಳೂರು ಗ್ರಾಮಾಂತರ ಜಿಲ್ಲೆ

ಪ್ರತಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕೆಳಕಂಡವರಿಗೆ ಕಳುಹಿಸಿದೆ.

1. ತಹಶೀಲ್ದಾರ್, ನೆಲಮಂಗಲ ತಾಲ್ಲೂಕುರವರಿಗೆ ಮೂಲ ಕಡತ ಹಾಗೂ ಚಲನ್‌ನೊಂದಿಗೆ ಕಳುಹಿಸುತ್ತಾ ಈ ಆದೇಶದ ಪ್ರಕಾರ ಸಂಬಂದಪಟ್ಟ ಸ.ನಂ. ಭೂ ಪರಿವರ್ತನೆಯಾಗಿದೆ ಎಂದು ಸಂಬಂಧಪಟ್ಟ ಆರ್.ಟಿ.ಸಿ.ಯಲ್ಲಿ ನಮೂದಿಸತಕ್ಕದ್ದು ಮತ್ತು ಈ ಜಮೀನಿಗೆ ಖಾತೆದಾರರ ಲೆಕ್ಕದಲ್ಲಿ ಸದರಿ ಜಮೀನಿನ ಭೂ ಕಂದಾಯವನ್ನು ನಿಗದಿಗೊಳಿಸುವುದು
2. ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ
3. ೬.೦೫.೨೦೦೬ರ ಏಕಗವಾಕ್ಷಿ ಸಮಿತಿಯಲ್ಲಿನ ಇಲಾಖೆಗಳ ಸಂಬಂಧಿತ ಅಧಿಕಾರಿಗಳಿಗೆ
4. ಅರ್ಜದಾರರಾದ ಶ್ರೀ.ಆರ್.ಎಸ್.ಮೂರ್ತಿ, ನಂ. ೯೫೮, ೨ನೇ ಮೈನ್, ೪ನೇ ಬ್ಲಾಕ್, ರಾಜಾಜಿನಗರ ಬೆಂಗಳೂರು -೧೦
5. ಹೆಚ್ಚಿನ ಪ್ರತಿ

ಜಿಲ್ಲಾಧಿಕಾರಿಗಳ ಪರವಾಗಿ,

ಬೆಂಗಳೂರು ಗ್ರಾಮಾಂತರ ಜಿಲ್ಲೆ

7. ಈ ಭೂಪರಿವರ್ತನಾ ಜಮೀನಿನಲ್ಲಿ ಸ್ಥಾಪಿಸಲಾಗುವ ಕೈಗಾರಿಕಾ ಘಟಕಗಳು ಹೊರಹೊಮ್ಮಿಸುವ ಹೊಗೆ ಅಥವಾ ಇತರ ಕಲ್ಮಶಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಿ ಸಾರ್ವಜನಿಕರ ಆರೋಗ್ಯಕ್ಕೆ ಯಾವುದೇ ರೀತಿಯ ಹಾನಿಯಾಗದಂತೆ ಹಾಗೂ ಪರಿಸರ ಮಾಲಿನ್ಯವಾಗದಂತೆ ನೋಡಿಕೊಳ್ಳತಕ್ಕದ್ದು. ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತಿತ ಜಮೀನಿನಲ್ಲಿ ಸ್ಥಾಪಿಸುವ ಕೈಗಾರಿಕಾ ಘಟಕಗಳು ಕರ್ನಾಟಕ ಮಾಲಿನ್ಯ ನಿಯಂತ್ರಣ ಉಪಯೋಗಿಸಿಕೊಳ್ಳತಕ್ಕದ್ದು.

8. ಸದರಿ ಬಡಾವಣೆಗೆ ಹೋಗಲು ಸಂಪರ್ಕ ರಸ್ತೆಯನ್ನು ಅನುಮೋದಿತ ಬಡಾವಣೆ ನಕ್ಷೆಯಲ್ಲಿರುವ ರೀತಿಯ ನಿರ್ಮಿಸತಕ್ಕದ್ದು.

9 ಬಡಾವಣೆಯೊಳಗೆ ಆಂತರಿಕ ರಸ್ತೆಗಳನ್ನು ಅಗಲಕ್ಕೆ ಅನುಗುಣವಾಗಿ ಏಕಗವಾಕ್ಷಿ ಸಮಿತಿಯಲ್ಲಿ ಪ್ರಾಧಿಕಾರ ಇಲಾಖೆಯವರು ಅನುಮೋದನೆ ನೀಡಿರುವಂತೆ ಮಾತ್ರ ನಿರ್ಮಿಸತಕ್ಕದ್ದು.

10. ಸಾರ್ವಜನಿಕ ಉಪಯೋಗಕ್ಕಾಗಿ ನಿಗದಿಪಡಿಸಲ್ಪಟ್ಟ ಈ ಕೆಳಗಿನ ನಿವೇಶನಗಳನ್ನು ಸಂಬಂಧಿಸಿದ ಪ್ರಾಧಿಕಾರಕ್ಕೆ ಹಸ್ತಾಂತರಿಸಿ ನೋಂದಾವಣೆ ಮಾಡಿಸಿಕೊಡತಕ್ಕದ್ದು.

| ನಿವೇಶನಗಳು | ಉದ್ದೇಶ | ವಿವರಗಳು | ವಿಸ್ತೀರ್ಣ | ಶೇಕಡವಾರು |
|---|---|---|---|---|
| | ವಾಸದ | Residential | 15674.11 | 53.50 |
| | | Commercial | 427.74 | 1.46 |
| | | Park | 2935.60 | 10.02 |
| | | C.A | 1464.87 | 5.00 |
| | | Roads | 8795.08 | 30.02 |
| | | Total | 29297.40 | 100.00 |

11. ಬಡಾವಣೆಯ ನಕ್ಷೆಯಲ್ಲಿ ಅನುಮೋದನೆಗೊಂಡ ವಿವಿಧ ಗಾತ್ರದ ಒಟ್ಟು ನಿವೇಶನಗಳು ಈ ಕೆಳಕಂಡಂತಿವೆ:

| ನಿವೇಶನದ ಗಾತ್ರ | ಸಂಖ್ಯೆ |
|---|---|
| 1) 9mx12m | 78 |
| 2) Odd Sites | 53 (೫೩) |
| Total | 131 |

12. ಬಡಾವಣೆ ರೂಪ ರೇಷೆಗೆ ಮತ್ತು ನಕ್ಷೆಗೆ ಅನುಮೋದನೆ ನೀಡುವ ಪ್ರಾಧಿಕಾರವು ಬಡಾವಣೆಯಲ್ಲಿ ಮೂಲಭೂತ ಸೌಕರ್ಯಗಳು ಪ್ರಾಧಿಕೃತ ನಿಯಮಗಳಿಗೆ ಅನುಗುಣವಾಗಿ ಇರುವ ಬಗ್ಗೆ ಮತ್ತು ಭೌತಿಕವಾಗಿ ಬಡಾವಣೆ ರಚನೆಯಾಗಿರುವ ಬಗ್ಗೆ ಖಚಿತಪಡಿಸಿಕೊಂಡು ನಿಯಮಗಳಂತೆ ಮಾರಾಟಕ್ಕೆ ನಿವೇಶನಗಳನ್ನು ಸದರಿ ಪ್ರಾಧಿಕಾರವು ಬಿಡುಗಡೆ ಪತ್ರ/ ಅನುಮತಿ ಪತ್ರ ನೀಡತಕ್ಕದ್ದು. ಅನುಮತಿ ಪತ್ರವಿಲ್ಲದೆ ನಿವೇಶನ ಪರಭಾರೆ ನಿಷೇಧಿಸಿದೆ.

13. ಭೂ ಪರಿವರ್ತನಾ ಪತ್ರ, ಬಡಾವಣೆ ಅನುಮೋದನೆ ಪತ್ರ, ಅನುಮೋದಿತ ಬಡಾವಣೆ ನಕ್ಷೆ ಹಾಗೂ ಹಾಗೂ ಬಡಾವಣೆಯಲ್ಲಿ ಮೂಲಭೂತ ಸೌಕರ್ಯ ಶಾಸನಾತ್ಮಕವಾಗಿ ರಚನೆಯಾದ ಬಗ್ಗೆ ನೀಡಿದ ಪತ್ರಗಳನ್ನು ಹಾಜರುಪಡಿಸಿ ನಿವೇಶನಗಳನ್ನು ನೋಂದಾವಣೆ ಮಾಡಿಸಿಕೊಳ್ಳತಕ್ಕದ್ದು.

14. ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಭೂ ಪರಿವರ್ತನೆ ಆದೇಶವನ್ನು ಯಾವುದೇ ಸೂಚನೆ ನೀಡದೇ ರದ್ದುಗೊಳಿಸಲಾಗುವುದು. ಮತ್ತು ಕರ್ನಾಟಕ ಭೂಕಂದಾಯ ಕಾಯಿದೆ ೧೯೬೪ರ ಕಲಂ ೯೬ರಂತೆ ದಂಡ ಶುಲ್ಕವನ್ನು ವಿಧಿಸಲು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಅಲ್ಲದೇ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿದ ಕಟ್ಟಡಗಳನ್ನು ಯಾವುದೇ ಪರಿಹಾರ ನೀಡದೇ ಕೆಡವಲು ಕ್ರಮ ತೆಗೆದುಕೊಳ್ಳಲಾಗುವುದು. ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ಭೂ ಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲಿ ಮಾಡಲಾಗುವುದು.

15. ಕರ್ನಾಟಕ ರಾಜ್ಯಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಸಮ್ಮತಿ ಪತ್ರ ಪಡೆಯುವ ಷರತ್ತಿಗೆ ಒಳಪಟ್ಟಿದೆ.